ಪ್ರಬಂಧ




ಎಸ್.ಆರ್. ವಿಜಯಶಂಕರ

ಕಲೆ: ಪ್ರವೀಣ್ ಆಚಾರ್ಯ


# ಮೈಲು ಬಸ್ಸಿನ ಸಾಯಿಬ್ಬರು

ಇದೊಂದು ಹಳೆ ಕತೆ. ಹಳತು ಅಂದರೆ ಬಹಳ ಹಳೆಯದಲ್ಲ. ಕೇವಲ 50 ವರುಷಗಳ ಹಿಂದಿನ ಬದುಕಿನ ಕತೆ. ಅಷ್ಟೇನಾ! ಬಹುಸಂಖ್ಯಾತ ದೇಶವಾಸಿಗಳು ಐನೂರು ಅಥವಾ ಸಾವಿರ ವರುಷಗಳ ಹಿಂದೆ ನಡೆದಿದೆ ಎನ್ನಲಾದ ಚರಿತ್ರೆಯ ಅನ್ಯಾಯದ ವಿರುದ್ಧ ಇಂದು, ನಿನ್ನೆ ಕೊಲೆಯಾದ ಹಿಂಸೆಯ ಬಗೆಗೆ ಆಕ್ರೋಶವೋ ಎಂಬ ರೀತಿಯಲ್ಲಿ ಆರ್ಭಟಿಸುತ್ತಿರುವಾಗ 50 ವರುಷಗಳ ಹಿಂದಿನ ಕತೆ ಇಂದು ನಿನ್ನೆ ನಡೆದಂತೆ ಅಲ್ಲವೆ ಎನ್ನುತ್ತೀರಾ? ಆಯಿತು ಬಿಡಿ. ನಾನು ಹೇಳಹೊರಟಿದ್ದು ನಮ್ಮ ಮೈಲು ಬಸ್ಸಿನ ಸಾಯಿಬ್ಬರ ಕತೆ.

ನಮ್ಮ ಊರಲ್ಲಿ ಬಹಳ ಕಾಲದಿಂದಲೂ ಇದ್ದ ಬಸ್ಸಿಗೆ ಮೈಲು ಬಸ್ಸು ಎಂದು ಹೆಸರು. ಶೆಟ್ಟಿ ಬಸ್ಸು, ಸೂಪರ್ ಬಸ್ಸು, ಮಾಡರ್ನ್ ಬಸ್ಸು, ಸಿ.ಪಿ.ಸಿ (ಕೆನರಾ ಪಬ್ಲಿಕ್ ಟ್ರಾನ್ಸ್‌ಪೋರ್ಟ್) ಬಸ್ಸು–ಹೀಗೆ ಕೆಲವಾರು ಬಸ್ಸುಗಳಿದ್ದರೂ, ಪುತ್ತೂರಿನಿಂದ 11.30ಕ್ಕೆ ಹೊರಟು, ವಿಟ್ಲಕ್ಕೆ 12 ಗಂಟೆ ನಡು ಮಧ್ಯಾಹ್ನ ತಲುಪಿ ಅಲ್ಲಿಂದ ಪೆರ್ಲ, ಬದಿಯಡ್ಕ ಮಾರ್ಗವಾಗಿ ಕಾಸರಗೋಡಿಗೆ ಹೋಗಿ ತಲುಪುತ್ತಿದ್ದ ಈ ಬಸ್ಸಿಗೆ ಅದರ ಡ್ರೈವರ್

